ಕೀಟಗಳ ಹಾವಳಿಯಿಂದ ಸಂರಕ್ಷಿಸಲಾಯಿತು. ಹಾನಿಗೊಳಗಾದ ಪ್ರದೇಶದಲ್ಲಿ ಪುನಃ ರಾಗಿಯನ್ನು ಬಿತ್ತಿಸಲಾಗಿದೆ. ಹೆಚ್ಚಿನ ಸಂಖ್ಯೆಯ ರೈತರಿಗೆ ತಿಳುವಳಿಕೆ ಕೊಡುವುದ ಕ್ಕಾಗಿ ಸ್ಥಳೀಯ ದಿನಪತ್ರಿಕೆಗಳು ಹಾಗೂ ಆಕಾಶವಾಣಿ ಮಾಧ್ಯಮವನ್ನು ಬಳಸ ಲಾಯಿತು.

ಇ) ಬಂದಿದೆ.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಈ ರೀತಿ ಕೀಟಗಳ ಹಾವಳಿಯಿಂದ ಸಂಕಷ್ಟಕ್ಕೆ ಒಳಗಾದಂಥ ರೈತರಿಗೆ ಸರ್ಕಾರದವರು ಪರಿಹಾರವನ್ನು ಏನಾದರೂ ಕೊಡುತ್ತಾರೆಯೆ?

ಶ್ರೀ ಎಸ್. ರೇವಣ್ಣ.—ಇದಕ್ಕೆ ಬೇಕಾದ ಔಷಧಗಳನ್ನು ಸಬ್ಸಿಡಿ ರೂಪದಲ್ಲಿ ಒದಗಿಸಲು ವ್ಯವಸ್ಥೆ ಮಾಡುತ್ತೇವೆ.

ಒಪ್ಪಂದದ ಆಧಾರದ ಮೇಲೆ ಪದವೀಧರ ಶಿಕ್ಷಣ ನೇಮಕಾತಿ

೩೧೮. ಶ್ರೀ ವಿಶ್ವನಾಥ್‌ಪಾಟೀಲ್ (ಚಿತ್ರಾಪುರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಂಟ್ರಾಕ್ಟ್ ಪದ್ಧತಿ ಮೇರೆಗೆ ಪದವೀಧರ ಶಿಕ್ಷಕರನ್ನು ನೇಮಿಸುವ ಶಿಕ್ಷಣ ಸಚಿವರ ಹೇಳಿಕೆಯು ಸ್ಟೈಪೆಂಡರಿ ಪದವೀಧರರ ಸಮಸ್ಯೆಯಂತೆ ಮುಂದೆ ಸಮಸ್ಯೆಯಾಗುವು ದಿಲ್ಲವೆ ?

ಆ) ಮುಂದೆ ತಲೆದೋರಬಹುದಾದ ಈ ಸಮಸ್ಯೆಯನ್ನು ಖಾಯಂ ಶಿಕ್ಷಕರನ್ನು ನೇಮಿಸುವ ಮೂಲಕ ಪರಿಹರಿಸಬಹುದಾಗಿದ್ದು ಹಾಗೆ ಮಾಡಲು ಸರ್ಕಾರದವರಿಗೆ ಇರುವ ಅಡಚಣೆಗಳು ಏನು?

ಇ) ಪ್ರತಿಯೊಂದು ಶಾಲೆಗೆ ಅವಶ್ಯಕತೆ ಇರುವಷ್ಟು ಶಿಕ್ಷಕರನ್ನು ನೇಮಿಸುವ ವಿಚಾರ ಸರ್ಕಾರದವರ ಗಮನದಲ್ಲಿ ಇದೆಯೆ?

ಈ) ಹಾಗಿದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು ?

ಶ್ರೀ. ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಪ್ರೌಢಶಾಲಾ ಶಿಕ್ಷಕರ ನೇಮಕಾತಿಯನ್ನು ನಿಯಮಾವಳಿಯ ಪ್ರಕಾರ ಮಾಡುವ ಕೆಲಸ ಪ್ರಾರಂಭವಾಗಿದ್ದರು ಅದು ಮುಗಿಯಲು ಇನ್ನೂ ಸ್ವಲ್ಪ ಸಮಯ ತೆಗೆದು ಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಯಾಗದಿರಲು ಕಾಂಟ್ರಾಕ್ಟ್ ಪದ್ಧತಿ ಮೇರೆಗೆ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಸೂಚಿಸಿದೆ.

ನಿಯಮಾವಳಿಯ ಪ್ರಕಾರ ನೇಮಕಾತಿ ಮಾಡಲು ಬೇಕಾದ ಕಾಲಸಮಯವೇ ಮುಖ್ಯ ಅಡಚಣೆ ಈ ತಾತ್ಕಾಲಿಕ ನೇಮಕಾತಿಯಿಂದಾ ಯಾವ ಸಮಸ್ಯೆಯು ಉದ್ಭವಿಸಲಾರದು

ಇ) ಹೌದು.

ಈ) ಸರ್ಕಾರವು ಪ್ರೌಢಶಾಲಾ ಶಿಕ್ಷಕರ ನೇಮಕಾತಿಯನ್ನು ಲೋಕಸೇವಾ ಆಯೋಗದ ವ್ಯಾಪ್ತಿಯಿಂದಾ ಹೊರತೆಗೆದು ಅದನ್ನು ವಿಭಾಗೀಯ ನೇಮಕಾತಿ ಮಂಡಳಿಗಳಿಗೆ ಒಪ್ಪಿಸಿ ಅದಷ್ಟು ಬೇಗ ಉಪಾಧ್ಯಾಯರ ನೇಮಕ ಮಾಡಲು ಈಗಾಗಲೇ ನಿರ್ಧರಿಸಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರುಗಳ ನೇಮಕಾತಿ

೩೧೯ ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಈ ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿವರೇ?

ಅ) ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ವೈಕೊಬಯೊಲಜಿ, ಉರ್ದು ಮತ್ತು ಸಂಸ್ಕೃತ ವಿಷಯಗಳಿಗೆ ಸಂಬಂಧಿಸಿದ ಹುದ್ದೆಗಳನ್ನು ಹರಿಜನರ ಅಭ್ಯರ್ಥಿಗಳಿಗಾಗಿ ಕಾದಿರಿಸಿದ್ದಿದು ಸರ್ಕಾರದವರ ಗಮನಕ್ಕೆ ಬಂದಿದೆಯೆ.,

ಆ) ಈ ವರೆಗೆ ಎಷ್ಟು ಹರಿಜನಪದವಿಧರರು ಈ ಹುದ್ದೆಗಳಿಗಾಗಿ ಅರ್ಜಿ ಹಾಕಿದ್ದಾರೆ ?

ಇ) ಈ ಹುದ್ದೆಗಳಿಗಾಗಿ ಎಂದಿನಿಂದ ಹರಿಜನ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೇಳ ಲಾಗುತ್ತಿದೆ.

ಶ್ರೀ. ರಾಚಯ್ಯ(ಶಿಕ್ಷಣ ಸಚಿವರು)

ಅ) ಹೌದು

ಆ) ವೈಕೊಬಯೊಲಜಿ,

ಪ್ರೊಫೆಸರ್,	)	
ರೀಡರ್	)	ಇಲ್ಲ
ಲೆಕ್ಚರರ್ಸ್	)	
ಉರ್ದು		
ರೀಡರ್ಸ್	)	ಇಲ್ಲ
ಲೆಕ್ಚರರ್ಸ್	)	
ಸಂಸ್ಕೃತ		
ರೀಡರ್	ಹರಿಜನ	–೧
ಲೆಕ್ಚರರ್ಸ್	ಹರಿಜನ	–೨

ಇ) ೨೦–೮–೧೯೮೧ ರಿಂದ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಹಣ್ಣು ಮಂತ್ರ ತರಕಾರಿ ಸಹಕಾರಿ ಸಂಘಗಳನ್ನು ಸ್ಥಾಪಿಸಿ ರೈತರಿಗೆ ಮಧ್ಯವರ್ತಿಗಳ ಕಾಟ ತಪ್ಪಿಸುವ ಬಗ್ಗೆ.

೨೭೬. ಶ್ರೀ ಬಿ. ಆರ್. ಪಾಟೀಲ್.(ಅಲಂದ್)—ಮಾನ್ಯ ಪಶು ಸಂಗೋಪನೆ ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹಣ್ಣು ಮತ್ತು ತರಕಾರಿಗಳ ವ್ಯಾಪಾರವನ್ನು ಸರ್ಕಾರದ ನಿಯಂತ್ರಣದಲ್ಲಿರುವ ಸಹಕಾರಿ ಸಂಘಗಳ ಮೂಲಕ ಮಾಡಿಸ ಬೆಳೆಗಾರರಿಗೆ ಯೋಗ್ಯ ಬೆಲೆ ದೊರಕಿಸಲು ಮತ್ತು ಮಧ್ಯ ವರ್ತಿಗಳ ತೊಂದರೆಯನ್ನು ತಪ್ಪಿಸಿ ನಿವಾರಿಸಲು ಈ ಹಿಂದೆ ಯೋಜನೆಯೊಂದನ್ನು ರೂಪಿಸಿದ್ದುದ ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಯೋಜನೆಯನ್ನು ಕಾರ್ಯಗತವಾಡದಿರಲು ಕಾರಣಗಳೇನು

ಇ) ಇಂಥಹ ಯೋಜನೆಯನ್ನು ರೂಪಿಸಿ ಬೆಳೆಗಾರರಿಗೆ ಯೋಗ್ಯ ಬೆಲೆ ದೊರೆಯುವಂತೆ ಹಾಗೂ ಮಧ್ಯವರ್ತಿಗಳ ತೊಂದರೆಯನ್ನು ತಪ್ಪಿಸಿ ಗ್ರಾಹಕರಿಗೆ ಹಣ್ಣು ಮತ್ತು ತರಕಾರಿಗಳಂ ಯೋಗ್ಯ ಬೆಲೆಗೆ ದೊರೆಯುವಂತೆ ಕ್ರಮ ತೆಗೆದುಕೊಳ್ಳುವ ಉದ್ದೇಶ ಸರ್ಕಾರದವರಿಗಿದೆಯೆ ?

ಶ್ರೀ ವಿಶ್ವನಾಥ್ ರೆಡ್ಡಿ ಮುದ್ನಾಳ್.—ಪಶುಸಂಗೋಪನೆ, ಪಶುವೈದ್ಯ ಮತ್ತು ತೋಟಗಾರಿಕೆ ಸಚಿವರು.

ಅ) ಹೌದು, ಬಂದಿದೆ